<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.**62/2020**</u>

ಚಾಸಾ-03 ಪ್ರಾಸಾ-03

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ:21.05.2025

| | | |
|---|---|---|
| ಹೆಸರು | : | ಕಲ್ಯಾಣಿ |
| ತಂದೆಯ ಹೆಸರು | : | ಯಲ್ಲಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಅಫಜಲಪೂರ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**</u>

ಚಾಸಾ-1 ಮತ್ತು 2 ರವರ ಪರಿಚಯ ಇರುತ್ತಾರೆ. ಸಾಕ್ಷಿಗೆ ಗುನ್ನೆ ಸ್ಥಳದ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**3** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಯಿತು. ಪಿಎಸಐ ಸಾಹೇಬರು ಪಂಚನಾಮೆ ಫೋಟೋ ತೆಗೆಯುವುದು ಇದೆ ನನಗೆ ಸಹಿ ಮಾಡು ಅಂತಾ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ಪಾಟೀ ಸವಾಲುಃ ಸ.ಸ.ಅ. ರವರಿಂದ**</u>

ದಿಃ 17.08.2019 ರಂದು ಬೆಳ್ಳಗ್ಗೆ 12.30 ರಿಂದ 01.30 ರ ವರೆಗೆ ನನ್ನ ಹಾಗು ಚಾಸಾ-2 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿ ಶ್ರೀ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರ ಮತ್ತು ವಿಜಯಸ್ಥಂಭಕ್ಕೆ ಹಾಕಿದ ಎರಡು ಚಪ್ಪಲಿ ಮತ್ತು ಎರಡು ಬೂಟುಗಳನ್ನು ನಮ

ಸಮಕ್ಷಮ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ಸಾಕ್ಷಿಗೆ ಗುನ್ನೆ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

## <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

**<u>ಸಿಸಿ ನಂ.62/2020</u>**

ಚಾಸಾ-04 ಪ್ರಾಸಾ-02

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣೀಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ:21.05.2025

| | | |
|---|---|---|
| ಹೆಸರು | : | ಸೈದಪ್ಪ |
| ತಂದೆಯ ಹೆಸರು | : | ಶಿವಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಅಫಜಲಪೂರ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ಚಾಸಾ-1, 5 ಮತ್ತು 6 ರವರ ಪರಿಚಯ ಇರುತ್ತಾರೆ. ಈಗ ಸುಮಾರು 4-5 ವರ್ಷಗಳ ಹಿಂದೆ ಕಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರ ಮತ್ತು ವಿಜಯಸ್ಥಂಭಕ್ಕೆ ಯಾರೋ ದುಶ್ಕರ್ಮಿಗಳು ಚಪ್ಪಲಿ ಹಾರ ಹಾಕಿರುತ್ತಾರೆ ಎಂದು ನಮಗೆ ತಿಳಿಸಿದ್ದು, ಅದಕ್ಕೆ ನಾವು ಶ್ರೀ ಸಂಗೊಳ್ಳಿ ರಾಯಣ್ಣ ರವರ ಪ್ರತಿಮೆ ಬಳಿ ಹೋದಾಗ ಅಲ್ಲಿ ಯಾವುದೇ ಅವಮಾನ ಮಾಡು ಚಪ್ಪಲಿ ಹಾರಗಳು ಇರಲಿಲ್ಲ. ನಂತರ ಚಾಸಾ-1 ರವರು ಪೋಲಿಸ ಠಾಣೆಗೆ ಹೋಗಿ ನೀಡಿರುತ್ತಾರೆ ನನಗೆ ಪೋಲಿಸರು ಸಹಿ ಮಾಡು ಅಂತಾ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 17.08.2019 ರಂದು ಬೆಳಗ್ಗೆ 06.30 ಗಂಟೆ ನಾನು ಭೂತಾಳಿಸಿದ್ದ ದೇವಸ್ಥಾನಕ್ಕೆ ಪೂಜೆ ಮಾಡಲು ಹೋಗುತ್ತಿರುವಾಗ ಅಫಜಲಪೂರ ಪಟ್ಟಣದ SKG Hotel ಹತ್ತಿರ ಇರುವ ಕಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ಮತ್ತು ವಿಜಯಸ್ಥಂಭಕ್ಕೆ ಯಾರೋ

ದುಷ್ಕರ್ಮಿಗಳು ಚಪ್ಪಲಿಗಳು ದಾರದಿಂದ ಕಟ್ಟಿ ಜೋತು ಹಾಕಿರುತ್ತಾರೆ ಎಂದು ನಾನು ಚಾಸಾ-1 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ. ಆ ನಂತರ ಚಾಸಾ-5,6 ರವರು ಸಹ ಬಂದು ಸದರಿ ಘಟನೆಯನ್ನು ನೋಡಿರುತ್ತಾರೆ ಎಂದರೆ ಸರಿ. ಅದೇ ದಿನ ರಾತ್ರಿ 08.00 ಗಂಟೆಗೆ ಪೋಲಿಸರು ನಮ್ಮನ್ನು ಠಾಣೆಗೆ ಕರೆಯಿಸಿ ಸದರಿ ಕೃತ್ಯವನ್ನು ಏಸಗಿದ ಆರೋಪಿಯ ಹೆಸರು ರವಿ ತಂದೆ ಶಿವಪ್ಪ ಹರನಾಳ ಅಂತಾ ತಿಳಿಸಿ ಆತನನ್ನು ತೋರಿಸಿರುತ್ತಾರೆ ಎಂದರೆ ಸರಿ. ಅದೇ ದಿನ ನಾನು ಪೋಲಿಸರ ಮುಂದೆ ಈ ಕೃತ್ಯದ ಕುರಿತು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಆರೋಪಿತನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಚಿಕ್ಕ ಮಕ್ಕಳು ಧರಿಸುವ ಎರಡು ಕಪ್ಪು ಬಣ್ಣದ ಬೂಟುಗಳು ಮತ್ತು ಎರಡು ಹೆಣ್ಣು ಮಕ್ಕಳ ಎರಡು ಕೆಪ್ಪು ಬಣ್ಣದ ಚಪ್ಪಲಿಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಲು ವಿಫಲಾಗಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಭಾವಚಿತ್ರ ನೋಡಿದ್ದಲ್ಲಿ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರಿಂದಃ-</u>

ಘಟನೆ ನಡೆದ ದಿನ ಯಾವ ದಿನಾಂಕ ಮತ್ತು ಯಾವ ದಿನ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲಾ. ಸಾಕ್ಷಿಯು ಮುಂದುವರೆದು ನಾನು ಶಾಲೆ ಕಲಿತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸದರಿ ಕೃತ್ಯವನ್ನು ಮಾಡಿಲ್ಲಾ ಎಂದರೆ ಸಾಕ್ಷಿಯು ಅದು ನನಗೆ ಹೇಳಲು ಬರುವುದಿಲ್ಲಾ ಎಂದು ನುಡಿಯುತ್ತಾರೆ. ಪೋಲಿಸರು ನನಗೆ ಸಹಿ ಮಾಡು ಅಂತಾ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರದೇ ಇದ್ದರು ಕೂಡಾ ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.**62/2020**</u>

ಚಾಸಾ-01 ಪ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ:21.05.2025

| | | |
|---|---|---|
| ಹೆಸರು | : | ವಿಠ್ಠಲ |
| ತಂದೆಯ ಹೆಸರು | : | ಭಾಗಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಹವಳಗಾ ಬಿ ಗ್ರಾಮ |

-: <u>ಮುಖ್ಯ ವಿಚಾರಣೆ **:-** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ **:-**</u>

ಚಾಸಾ-4 ರಿಂದ 6 ರವರ ಪರಿಚಯ ಇರುತ್ತಾರೆ. ನಾನು ಹವಳಗಾ ಗ್ರಾಮದಲ್ಲಿ ಇದ್ದೆ, ನಮ್ಮ ಸಮಾಜ ವತಿಯಿಂದ ನನಗೆ ದೂರವಾಣಿ ಕರೆ ಮಾಡಿ ಅಫಜಲಪೂರಕ್ಕೆ ಕರೆಯಿಸಿರುತ್ತಾರೆ. ಸಮಾಜ ವತಿಯಿಂದ ನನಗೆ ಪೋಲಿಸ ಠಾಣೆಗೆ ದೂರು ನೀಡು ಅಂತಾ ತಿಳಿಸಿರುತ್ತಾರೆ. ಅದಕ್ಕಾಗಿ ನಾನು ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಆ ನಂತರ ಆರೋಪಿತನ ತಂದೆ-ತಾಯಿ ನಮ್ಮ ಬಳಿ ಬಂದು ಆರೋಪಿಯದು ತಪ್ಪಾಗಿರುತ್ತದೆ ಒಂದು ಸಾರಿ ಕ್ಷಮಿಸಿ ಅಂತಾ ವಿನಂತಿಸಿಕೊಂಡಿರುತ್ತಾರೆ. ಅದಕ್ಕಾಗಿ ನಾವು ರಾಜೀ ಆಗಿರುತ್ತೇವೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 17.08.2019 ರಂದು ಬೆಳಗ್ಗೆ 06.30 ಗಂಟೆ ಸುಮಾರಿಗೆ ಅಫಜಲಪೂರ ಪಟ್ಟಣದ SKG Hotel ಹತ್ತಿರ ಇರುವ ಕಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರ ಮತ್ತು

ವಿಜಯಸ್ಥಂಭಕ್ಕೆ ಯಾರೋ ದುಶ್ಕರ್ಮಿಗಳು ಚಪ್ಪಲಿಗಳು ದಾರದಿಂದ ಕಟ್ಟಿ ಜೋತು ಹಾಕಿರುತ್ತಾರೆ ಎಂದು ಚಾಸಾ-4 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿ. ನಾವು ಸ್ಥಳಕ್ಕೆ ಬಂದು ನೋಡಿದಾದ ವಿಜಯಸ್ಥಂಭಕ್ಕೆ ದಾರದಿಂದ ಕಟ್ಟಿದ ಎರಡು ಬೂಟುಗಳು ಮತ್ತು ಎರಡು ಹೆಣ್ಣು ಮಕ್ಕಳ ಚಪ್ಪಲಿಗಳನ್ನು ಕಟ್ಟಿ ನೇತು ಹಾಕಿರುವುದು ಕಂಡು ಬಂದಿರುತ್ತದೆ ಎಂದರೆ ಸರಿ. ಚಾಸಾ-4 ರಿಂದ 6 ರವರು ಸಹ ಬಂದು ನೋಡಿದಾಗ ನೇತು ಹಾಕಿರುವ ಚಪ್ಪಲಿಗಳು ಇದ್ದವು ಎಂದರೆ ಸರಿ. ಕಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ರವರ ಪ್ರತಿಮೆ ಮತ್ತು ವಿಜಯಸ್ಥಂಭಕ್ಕೆ ಅವಮಾನ ಮಾಡುವ ಉದ್ದೇಶದಿಂದ ಸದರಿ ಕೃತ್ಯವನ್ನು ಮಾಡಿರುತ್ತಾರೆ ಮತ್ತು ಸದರಿ ಕೃತ್ಯ ಎಸಗಿದ ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೇಂದು ನಾನು ದಿಃ 17.08.2019 ರಂದು ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು. ಅದೇ ದಿನ ನಾನು ಪೋಲಿಸರಿಗೆ ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಲು ಸ್ಥಳವನ್ನು ತೋರಿಸಿರುತ್ತೇನೆ. ಅದೇ ದಿನ ರಾತ್ರಿ 08.00 ಗಂಟೆಗೆ ಸದರಿ ಕೃತ್ಯ ಎಸಗಿದ ಆರೋಪಿಯ ಹೆಸರು ರವಿ ತಂದೆ ಶಿವಪ್ಪ ಹರನಾಳ ಅಂತಾ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿತನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿಗೆ ಗುನ್ಹೆ ಸ್ಥಳದ ಪಂಚನಾಮೆಯ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**2** ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಚಿಕ್ಕ ಮಕ್ಕಳು ಧರಿಸುವ ಎರಡು ಕಪ್ಪು ಬಣ್ಣದ ಬೂಟುಗಳು ಮತ್ತು ಎರಡು ಹೆಣ್ಣು ಮಕ್ಕಳ ಎರಡು ಕೆಪ್ಪು ಬಣ್ಣದ ಚಪ್ಪಲಿಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿಮು.ಮಾ-**1** ರಿಂದ ಮು.ಮಾ-**4** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರಿಂದಃ-</u>

ನನಗೆ ಫಿರ್ಯಾದಿ ನೀಡುವ ಮೊದಲು ಯಾರು ಆ ಕೃತ್ಯ ಎಸಗಿರುತ್ತಾರೆ ಎಂದು ಗೊತ್ತಿರಲಿಲ್ಲಾ ಎಂದರೆ ಸರಿ. ಮು.ಮಾ-1 ರಿಂದ 4 ರಂತೆ ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಈ ಪ್ರಕರಣಕ್ಕೂ ಆರೋಪಿಗು ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನನಗೆ ಪೋಲಿಸರು

ಆರೋಪಿತನನ್ನು ತೋರಿಸಿದ್ದು, ಆದ್ದರಿಂದ ಆತನೇ ಕೃತ್ಯ ಏಸಗಿರುತ್ತಾನೆ ಎಂದು ನಾನು ನಂಬಿರುತ್ತೇನೆ. ಆರೋಪಿಯು ನಮ್ಮ ಹಾಲು ಮತದ ಸಮುದಾಯಕ್ಕೆ ಸೇರಿರುತ್ತಾರೆ ಎಂದರೆ ಸರಿ. ಪೋಲಿಸರು ಆರೋಪಿತನನ್ನು ತೋರಿಸಿದ್ದು, ಆದ್ದರಿಂದ ಆತನೇ ಕೃತ್ಯ ಏಸಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ